ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

त्रैमासिक पत्रिका

जनवरी-मार्च २०१६



Scanned with CamScanner

# ಪರಿವಿಡಿ


| | | |
|---|---|---|
| ೧. ಈಶ್ವರ ಕಮ್ಮಾರ ಅವರ ಕವಿತೆಗಳಲ್ಲಿ ರಾಚನಿಕ ವೈಶಿಷ್ಟ್ಯಗಳು | • ಪ್ರೊ. ಅಮೋಗಸಿದ್ಧ .ಈ. ಹಂಜಗಿ | ೨೮ |
| ೨. ಜಿ. ಎನ್. ಮೋಹನರ ಪ್ರವಾಸ ಕಥನ: ನನ್ನೊಳಗಿನ ಹಾಡು ಕ್ಯೂಬಾ | • ಪ್ರೊ. ಬಿ. ಬಿ. ಡೆಂಗನವರ | ೩೧ |
| ೩. ಕಣಹಬ್ಬ | • ಶಶಿಕುಮಾರ ಕೆ. ಎ. | ೩೩ |
| ೪. ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಪ್ರತಿರೋಧದ ಸ್ವರೂಪ | • ಮಮತಾ ಆರ್. ಕಾಂಬಳೆ | ೩೫ |
| ೫. ವೀರಶೈವ ಲಘು ಸಾಹಿತ್ಯ ಪ್ರಕಾರ : ಮಂತ್ರ ಗೋಪ್ಯದ ಅರ್ಥ ಮತ್ತು ಸ್ವರೂಪ | • ಡಾ. ಆರ್. ವಿ. ಪಾಟೀಲ | ೩೮ |
| ೬. ಗೀತಾ ನಾಗಭೂಷಣರವರ ಕಥೆಗಳಲ್ಲಿ ದಲಿತ ಸಂವೇದನೆ | • ಕು. ಕವಿತಾ ಅಮೃತರಾವ ಕಾಂಬಳೆ | ೪೩ |
| ೭ ದೈನಂದಿನ ಸಂದರ್ಭದಲ್ಲಿ ಹಳಗನ್ನಡ ಪದ್ಯಗಳ ಪ್ರಸ್ತುತತೆ | • ಡಾ. ಎಸ್. ಬಿ. ರಾಠೋಡ | ೪೫ |
| ೮. ಶರಣರು ಕಂಡ ಸಿದ್ಧರಾಮ | • ಶ್ರೀ ಸಂಗಮೇಶ ತೇಲಿ | ೫೦ |
| ೯. ಶಿಲ್ಪ ಹಾಗೂ ವರ್ಣಚಿತ್ರಗಳಲ್ಲಿ ಅತ್ಯೇಂದ್ರಚೋಳನ ಕಥೆ | • ಪ್ರೊ. ರಮೇಶ ಮ. ಕಲ್ಲನಗೌಡ | ೫೨ |
| ೧೦. ಮಹಿಳೆ ನಡೆದು ಬಂದ ದಾರಿ | • ಸಿರ್ಸೆ ಕಮಲಾ ಮಲ್ಲಿಕಾರ್ಜುನ | ೫೫ |
| ೧೧. "ಶಂಕರ ಮೋಕಾಶಿ ಪುಣೇಕರ"ರ ಬದುಕು ಬರಹ | • ಜಯಶ್ರೀ. ಎಸ್. ಇಂಗಳೆ | ೫೮ |
| ೧೨. ಅಮರಕಂಟಕದಲ್ಲಿ ಅರ್ಥಪೂರ್ಣ ಕನ್ನಡ ಮಹಾಮೇಳ | • ಡಾ ಬಸವರಾಜ ಪಿ. ಡೋಣೂರ | ೬೧ |
| ೧೩. ಕಂಬಿ ಮಲ್ಲಯ್ಯ : ಒಂದು ಸಾಂಸ್ಕೃತಿಕ ಅಧ್ಯಯನ | • ಪ್ರೊ. ರಮೇಶ ತೇಲಿ | ೬೩ |
| ೧೪. "ಸಣ್ಣಾಟ ರಂಗಭೂಮಿಯ ವಿಶ್ಲೇಷಣೆ" | • ಪ್ರೊ. ಎಸ್. ಪಿ. ಮದ್ರೇಕರ | ೭೦ |


Scanned with CamScanner

# ಜಿ. ಎನ್. ಮೋಹನರ ಪ್ರವಾಸ ಕಥನ: ನನ್ನೊಳಗಿನ ಹಾಡು ಕ್ಯೂಬಾ

• ಪ್ರೊ. ಬಿ.ಬಿ. ಡೆಂಗನವರ

ಹೊಸಗನ್ನಡ ನವ್ಯೋತ್ತರ ಸಾಹಿತ್ಯ ಸಂದರ್ಭದ ಮಹತ್ವದ ಲೇಖಕರ ಸಾಲಿನಲ್ಲಿ ಶ್ರೀ ಜಿ.ಎನ್. ಮೋಹನ್ ಅವರು ನಮ್ಮ ಮುಂದೆ ನಿಲ್ಲುತ್ತಾರೆ. ಕವಿ, ನಾಟಕಕಾರ, ಅನುವಾದಕ, ಚಿಂತಕ, ಪತ್ರಕರ್ತ ಹೀಗೆ ಹತ್ತು ಹಲವು ವಿಧಗಳಲ್ಲಿ ಅವರ ವ್ಯಕ್ತಿತ್ವದ ಹರವು ವಿಸ್ತರಿಸಿಕೊಳ್ಳುತ್ತದೆ. ಅವರ ಪ್ರಮುಖ ವೈವಿಧ್ಯಮಯ ಕೃತಿಗಳಲ್ಲಿ 'ಸೋನೆ ಮಳೆಯ ಸಂಜೆ,' 'ಪ್ರಶ್ನೆಗಳಿರುವುದು ಶೇಕ್ಸ್ ಪೀಯರನಿಗೆ' ಕವನ ಸಂಕಲನಗಳು, 'ಥರ್ಡ ಬೆಲ್' ರಂಗ ಕೃತಿ. ಡೋರ್ ನಂ.142 ಎಂಬ ನೆನಪಿನ ಕಥನ, 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಅನುವಾದಿತ ಕೃತಿ, 'ನನ್ನೊಳಗಿನ ಹಾಡು ಕ್ಯೂಬಾ' ಪ್ರವಾಸಕಥನವಾಗಿದೆ. ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಪುತಿನ ಹಾಗೂ ಸಂದೇಶ ಪ್ರಶಸ್ತಿಯಂಥ ಗೌರವಗಳು ಇವರಿಗೆ ಸಂದಿವೆ. ಶ್ರೀ ಜಿ.ಎನ್. ಮೋಹನ್ ಕೃತಿಗಳಲ್ಲಿ ಪ್ರವಾಸ ಕಥನವಾಗಿರುವ 'ನನ್ನೊಳಗಿನ ಹಾಡು ಕ್ಯೂಬಾ ಇದು ಕ್ಯೂಬಾ ದೇಶದ ವಿಶಿಷ್ಟ ಅನುಭವ ಲೋಕವನ್ನು ಅನಾವಣರಗೊಳಿಸುತ್ತದೆ. ಇಲ್ಲಿ ಕ್ಯೂಬಾದಂತ ಚಿಕ್ಕ ರಾಷ್ಟ್ರದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿಪುಲ ಅನುಭವಗಳನ್ನು ಜಿ.ಎನ್. ಮೋಹನ್ ಅವರು ಅತ್ಯಂತ ಮನ ಮಿಡಿಯುವ ಕಾವ್ಯ ಶೈಲಿಯಲ್ಲಿ ಕಟ್ಟಿಕೊಡುತ್ತಾರೆ. ಈ ಕಾರಣಕ್ಕಾಗಿಯೇ 'ನನ್ನೊಳಗಿನ ಹಾಡು ಕ್ಯೂಬಾ' ತನ್ನೆಡೆಗೆ ಓದುಗರನ್ನು ತೀವ್ರವಾಗಿ ಸೆಳೆಯಲ್ಪಡುತ್ತದೆ.

'ಕ್ಯೂಬಾ' ಜಗತ್ತಿನ ಹಿರಿಯಣ್ಣನೆನಿಸಿಕೊಂಡಿರುವ ಅಮೇರಿಕಾದ ಕೆಳಗೆ ಇರುವ ಅತ್ಯಂತ ಪುಟ್ಟ ಕಮ್ಯುನಿಷ್ಟ ದೇಶ, ಅಷ್ಟೇ ಅಲ್ಲ; ಅದು ಅಮೇರಿಕಾದ ನಿದ್ದೆಗೆಡಿಸಿದ ದೇಶವೂ ಹೌದು. ಕಮ್ಯುನಿಷ್ಟ ತತ್ವ ಸಿದ್ಧಾಂತದ ತಳಹದಿಯ ಮೇಲೆ ಈ ದೇಶದ ಆಡಳಿತ ಚುಕ್ಕಾಣಿ ಹಿಡಿದಿರುವ ಫಿಡೆಲ್ ಕ್ಯಾಷ್ಟ್ರೋ ಉತ್ತಮ ಆಡಳಿತ, ದೇಶಾಭಿಮಾನ ತುಂಬಿ ಬಲಿಷ್ಠ ರಾಷ್ಟ್ರವಾಗಿಸಿದ್ದಾನೆ. ಲೇಖಕರೇ ಹೇಳುವಂತೆ 'ಕ್ಯೂಬಾ ಹೇಳಿಕೇಳಿ ಕನಸುಗಾರರ ನಾಡು, ಕನಸುಕಾಣದವರಿಂದ ಕ್ರಾಂತಿ ಸಾಧ್ಯ ವಿಲ್ಲ. ಕ್ರಾಂತಿಯನ್ನು ನಿಜಮಾಡಿದ ದೇಶ'. ಅದು ತುಂಬಾ ಬಡತನವನ್ನು ಅನುಭವಿಸುತ್ತಿರುವ ದೇಶವೂ ಆಗಿದೆ. ಜಿ.ಎನ್. ಮೋಹನ ಅವರು ಕ್ಯೂಬಾದಲ್ಲಿ ನಡೆದ ಅಂತರಾಷ್ಟ್ರೀಯ ಯುವಜನ ಉತ್ಸವದಲ್ಲಿ ಮೊಟ್ಟ ಮೊದಲ ಬಾರಿಗೆ ನಡೆದ ಯುವ ಪತ್ರಕರ್ತರ ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದರು. ಅವರು ಕ್ಯೂಬಾ ಸಮಾವೇಶಕ್ಕೆ ಹೋಗಿ ಬಂದು ಅಲ್ಲಿನ ಜನ, ಸಂಸ್ಕೃತಿ, ರಾಜಕೀಯ, ಸಾಮಾಜಿಕ, ಸಾಹಿತ್ಯ ಭಾಷೆ ಆಚಾರ ವಿಚಾರ ಮೊದಲಾದ ಸಂಗತಿಗಳ ಕುರಿತು ಬರೆದ ಪ್ರವಾಸ ಕಥನ ಇದಾಗಿದೆ. ಹಾಗಾಗಿ ಇದು ಅಲ್ಲಿನ ಸಾಮಾನ್ಯ ವಿವರಗಳನ್ನು ಮಾತ್ರ ಒಳಗೊಳ್ಳದೆ, ಅಲ್ಲಿನ ಜನರ ಸ್ವಾಭಿಮಾನದ ಹೋರಾಟದ ಮಗ್ಗಲುಗಳನ್ನು ಅತ್ಯಂತ ಹೃದಯ ಸ್ಪರ್ಶಿಯಾಗಿ ತೆರೆದಿಡುತ್ತದೆ.

ಕ್ಯೂಬಾ ದೇಶದ ಬಗ್ಗೆ ಜಿ.ಎನ್. ಮೋಹನ್ ಅವರಲ್ಲಿ ತೀವ್ರವಾದ ಆಸಕ್ತಿ, ಕುತೂಹಲಕ್ಕೆ ಕಾರಣವಾದದ್ದು ಮೇ ಒಂದರ ಕಾರ್ಮಿಕ ದಿನಾಚರಣೆ, ಅದರ ಅಂಗವಾಗಿ ಕ್ಯೂಬಾ ದೇಶಕ್ಕೆ ಒಂದು ರೂಪಾಯಿ ಕಾಣಿಕೆ ಕೊಡುವುದರ ಮುಖಾಂತರವಾಗಿ ಅವರೇ ಹೇಳುವು ಮಾತನ್ನು ಇಲ್ಲಿ ಗಮನಿಸಬೇಕು "ಅವರು ಈಗ ಒಂದು ರೂಪಾಯಿ ಕೇಳುತ್ತಿರುವುದು ಒಂದು ದೇಶಕ್ಕಾಗಿ, ಇದು ನನ್ನನ್ನು ಬೆರಗುಗೊಳಿಸಿದ ಸಂಗತಿ. ಎಲ್ಲಿಯ ಕ್ಯೂಬಾ, ಎಲ್ಲಿಯ ಭಾರತ, ಎಲ್ಲಿಯ ಬೆಂಗಳೂರು, ಆ ದೇಶಕ್ಕೇಕೆ ಒಂದು ರೂಪಾಯಿಯ ನೆರವು. ಈ ಪ್ರಶ್ನೆ ನನ್ನ ತಲೆಯಲ್ಲಿ ಮೊಳೆತಿದ್ದೇ ತಡ ಕ್ಯೂಬಾ ಹಾಗೂ ನನ್ನ ನಡುವಿನ ಗೋಡೆಗಳು ಇಲ್ಲವಾಗುತ್ತಾ ಹೋದವು. ಗೆಳೆಯನ ಮನೆಯದಾರಿ ದೂರವಲ್ಲ ಎಂಬಂತೆ ಹಾದಿ ಹತ್ತಿರವಾಗತೊಡಗಿತು. ಕ್ಯೂಬಾ ನನ್ನ ನೆರೆ ಮನೆ ಯಾಯಿತು. ನನ್ನೊಳಗಿಳಿಯಿತು. ನನ್ನೊಳಗಿನ ಹಾಡಾಯಿತು."[1] ಇದು ಮೋಹನ ಅವರಿಗೆ ಕ್ಯೂಬಾ ದೇಶದ ಬಗ್ಗೆ ಚಿಂತಿಸುವುದಕ್ಕೆ ಆ ದೇಶಕ್ಕೆ ಹೋಗ ಬೇಕೆನ್ನುವುದರ ಬಗ್ಗೆ ಆಸಕ್ತಿ ಹುಟ್ಟಿಕೊಂಡಿತು. ಕ್ಯೂಬಾದ ಪ್ರಜೆಗಳಲ್ಲಿ ದೇಶಾಭಿಮಾನ, ಸ್ವಾತಂತ್ರ್ಯದ ಹೋರಾಟ, ಸವಾಲುಗಳನ್ನು ಎದುರಿಸುವ ಆತ್ಮ ಸ್ಥೈರ್ಯ ತುಂಬಿದವರಲ್ಲಿ ಚೆಗೆವಾರ್ ಮತ್ತು ಫಿಡೆಲ್ ಕ್ಯಾಸ್ಟ್ರೋ ಅತ್ಯಂತ ಮಹತ್ವದ ಪಾತ್ರ ವಹಿಸಿದವರು. ಶ್ವೇತವರ್ಣೀಯ ನಾಡಿನ ಅಂಚಿನಲ್ಲಿರುವ ಕಪ್ಪುವರ್ಣೀಯ ದೇಶ ಈ ಕ್ಯೂಬಾ, ನೀನು ಕಪ್ಪು ಎನ್ನುವ ಮನಸ್ಸುಗಳು ಸರಕಾರಗಳು ಸೃಷ್ಟಿಯಾದಾಗ 'ಒಂದೊಂದು ಮನೆಯಲ್ಲಿ ಒಬ್ಬೊಬ್ಬ 'ಚೆ....? ಮಾಡುವ ಕನಸುಗಳು ಬೆಳೆದವು, ಮಣಿ' ಎನ್ನುವ ಅಮೇರಿಕಾ ಮಣಿಯಲಾರೆ ಎನ್ನುವ ಕ್ಯೂಬಾ ಇಂದು ಜಗವ ಬಯಕೆಗಳು ಮಾಡಿದ ಕಡೆಯಲೆಲ್ಲಾ ಈ ಕ್ಯೂಬಾ" ಸೃಷ್ಟಿಯಾಗಿದ್ದರ ಬಗ್ಗೆ ತುಂಬಾ ಕಾವ್ಯ ಭಾಷೆಯಲ್ಲಿ ಪ್ರತಿಯೊಬ್ಬ ಓದುಗರ ಹೃದಯದಾಳಕ್ಕೆ ಇಳಿದು ಮನಸ್ಸು ತಳಮಳಿಸುವ ರೀತಿಯಲ್ಲಿ ಕ್ಯೂಬಾ ಪ್ರವಾಸಾನುಭವಗಳನ್ನು ಕಟ್ಟಿಕೊಡುತ್ತ ಹೋಗುತ್ತಾರೆ, ಹಾಗಾಗಿ ಜಿ.ಎನ್. ಮೋಹನ್ ಅವರ ನನ್ನೊಳಗಿನ ಹಾಡು ಕ್ಯೂಬಾ' ಇತರೆ ಪ್ರವಾಸ ಕಥನಗಳಿಗಿಂತಲೂ ತುಂಬಾ ಭಿನ್ನವಾಗಿ ಗಮನ ಸೆಳೆಯುತ್ತದೆ ಎಂದು ಹೇಳಬಹುದು.

ಕ್ಯೂಬಾ ಎಂಬ ಎರಡಂಗುಲದ ಪುಟ್ಟ ದೇಶದ ಬಗೆಗೆ ಅನೇಕ ಕಥೆಗಳು ಜನಮನದಲ್ಲಿ ಜನಜನಿತಗೊಂಡಿದ್ದರ ಬಗ್ಗೆ 'ಶಾರಾದಾ ಅಟ್ಲಾಸ್‌ನ 14ನೇ ಪುಟಕ್ಕೆ' ಎಂಬ ಅಧ್ಯಾಯದಲ್ಲಿ ವಿಶ್ಲೇಷಿಸುತ್ತಾರೆ. ಕ್ಯೂಬಾ ಎಂದರೆ ಶುಗರ್ ಬೌಲ್ ಆಫ್ ದಿ ವರ್ಲ್ಡ್,' ಜಗತ್ತಿನ ಸಕ್ಕರೆಯ ಬಟ್ಟಲು. ಅಮೇರಿಕೆಯ ನಿದ್ದೆಗೆಡಿಸಿದ ಕಮ್ಯುನಿಷ್ಟ ದೇಶ. ಚೆಗೆವಾರನಂಥ ಹೋರಾಟಗಾರ, ಫಿಡೆಲ್‌ಕ್ಯಾಸ್ಟ್ರೋನಂತಹ ಅಧ್ಯಕ್ಷ.

ಸಿಗಾರ್‌ಕ್ಕೆ ತುಂಬಾ ಪ್ರಸಿದ್ಧಿ. ಕ್ಯೂಬಾದಿಂದ ಬರುವ ಎಷ್ಟೊ ಸ್ನೇಹಿತರು ಸಿಗಾರ್ ಸೇದು, ಹಾಡು, ಕುಣಿ ಎಂಬ ಯಥೇಚ್ಚ ಸಲಹೆ ನೀಡಿದ್ದರ ಕುರಿತಂತೆ ಅನೇಕ ಸಂಗತಿಗಳನ್ನು ಇಲ್ಲಿ ಬಿಚ್ಚಿಡುತ್ತಾ ಹೋಗುತ್ತಾರೆ, ಗೆಳೆಯ ಗುರುಶಾಂತ, ಅನೇಕ ಎಡವಾದಿ ಚಿಂತನ ಮನಸ್ಸಿನ ಸಂಗಾತಿಗಳು ಮೋಹನರಂತೆ ಉದ್ದೇಶವನ್ನಿಟ್ಟುಕೊಂಡೇ ಕ್ಯೂಬಾದ ಜೋಸ್‌ಮಾರ್ಟ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಜಗತ್ತಿನ ನಾನಾ ಕಡೆಗಳಿಂದ ಜನರು ಬಂದು ಆ ಪುಟ್ಟ ವಿಮಾನ ನಿಲ್ದಾಣವೇ ಒಂದು ಜಗತ್ತಾಗಿ ಬದಲಾಗಿತ್ತು. ಕ್ಯೂಬಾ ನಿರಾಭರಣ ಸುಂದರಿ. ಇಲ್ಲಿ ಉತ್ಸಾಹ ನೋಡಿಯೇ ಉತ್ಸವಹ ನಿರ್ಧರಿಸಬೇಕು. ಕಳೆದ 50 ವರ್ಷಗಳ ಹಿಂದೆ ಸಾಮ್ರಾಜ್ಯಶಾಹಿಯ ಯುದ್ಧಪಿಪಾಸುತನ, ಜಗತ್ತನ್ನು ಕೊಳ್ಳೆಹೊಡೆಯುವ ಆಶೆಬುರುಕುತನ, ತನ್ನ ಮಾತನ್ನೇ ಎಲ್ಲರೂ ಕೇಳಬೇಕೆಂಬ ಅಹಂಕಾರದ ವಿರುದ್ಧ ಸೆಡ್ಡು ಹೊಡೆದಿದ್ದ ದೇಶದಲ್ಲಿ ಯುವ ಜನ ಸೇರಿದಂತೆ ಅನೇಕ ಪ್ರಗತಿ ಪರ ಚಿಂತಕರ ಸಮ್ಮೇಳನಕ್ಕೆ ವೇದಿಕೆಯಾಗಿ ಕ್ಯೂಬಾ ಕಂಗೊಳಿಸುತ್ತದೆ. ಅಮೇರಿಕಾ ಸಾಮ್ರಾಜ್ಯ ಶಾಹಿ ಬಣಕ್ಕೆ ಸೇರಿದ್ದರೆ ಕ್ಯೂಬಾದಂತ ದೇಶವು ಸಮಾಜವಾದಿ ಬಣಕ್ಕೆ ಸೇರಿದ ದೇಶ. ಈ ದೇಶದಲ್ಲಿ ಬಡತನ ತಾಂಡವವಾಡುತ್ತಿದ್ದರೂ ಸಮ್ಮೇಳನದ ವೇದಿಕೆಗೆ ಅರ್ಥಪೂರ್ಣ ಆಥಿತ್ಯ ನೀಡುವ ಮೂಲಕ ತನ್ನ ಮನುಷ್ಯ ಪ್ರೀತಿಯನ್ನು ಮೆರೆದ ಬಗ್ಗೆ ಜಿ.ಎನ್. ಮೋಹನ್ ಅವರು ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿಸಿದ್ದಾರೆ.

ಕ್ಯೂಬಾದಲ್ಲಿ ಜಾಗತಿಕ ಸಮ್ಮೇಳನಕ್ಕೆ ಬರದಂತೆ, ಅದರಲ್ಲೂ ಅಮೇರಿಕನ್ನರಿಗೆ ಅಲ್ಲಿಗೆ ಹೋಗದಂತೆ ಮಾಡಿ ಕಠಿಣಕ್ರಮ ಜರುಗಿಸುವ ಎಚ್ಚರಿಸಿದರೂ ಅನೇಕ ಅಮೇರಿಕನ್ನರು ಈ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕ್ಯೂಬಾ ಮಾಡಿತ್ತು. ಅಮೇರಿಕನ್ನರು ತಮ್ಮ ಜೀವವನ್ನೇ ಪಣಕ್ಕಿಟ್ಟು ಬಂದಿದ್ದು. ಅಮೇರಿಕಾಕ್ಕೆ ಭಾರಿ ಮುಖಭಂಗವಾಗಿದ್ದರ ಬಗ್ಗೆ ವಿವರಿಸುತ್ತಾರೆ. ಕ್ಯೂಬಾ ಸಮ್ಮೇಳನಕ್ಕೆ ಬಂದ ಅತಿಥಿಗಳಿಗೆ ಇಡೀ ದೇಶ ಪ್ರಜೆಗಳು ತಮ್ಮ ಮನೆಗಳಲ್ಲಿ ಆಥಿತ್ಯ ನೀಡಿ ಸತ್ಕರಿಸಿ ತಮ್ಮ ಮಾನವ ಪ್ರೀತಿಯನ್ನು ಇಡೀ ಜಗತ್ತಿಗೆ ತೋರಿಸಿಕೊಡುತ್ತಾರೆ. ಜಿ. ಎನ್. ಮೋಹನರ ಅವರು ಅಲ್ಲಿನ ನಾಗರಿಕರೊಬ್ಬರ ಮನೆಯಲ್ಲಿ ತಾವು ಪಡೆದುಕೊಂಡ ಆಥಿತ್ಯವನ್ನು ಪ್ರವಾಸಕಥನದಲ್ಲಿ ಕಟ್ಟಿಕೊಟ್ಟಿರುವರು.

ಕ್ಯೂಬಾ ತನ್ನೊಡಲೊಳಗೆ ಅನೇಕ ಸಂಘರ್ಷ, ತಾಕಲಾಟ, ಸಂಕಷ್ಟಗಳನ್ನು ಅನುಭವಿಸಿ ಸ್ವಾತಂತ್ರ್ಯಕ್ಕೆ ಹೊರಾಡುತ್ತ ಬಂದ ದೇಶ ಕ್ಯೂಬಾವು ಸ್ಪೇನ ಸರಕಾರದ ಸವಾಧಿಕಾರಿ ಆಡಳಿತದ ವಿರುದ್ಧ ಬಂಡೆದ್ದಾಗ ಅಮೇರಿಕಾವು ಸುಮ್ಮನೆ ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತದೆ. ಕಾಡುನೋಡುವ ತಂತ್ರವನ್ನು ಅನುಸರಿಸುತ್ತದೆ ಯಾವಾಗ ಕ್ಯೂಬಾದ ಸಕ್ಕರೆ ಖಾರ್ಕಾನೆಗಳು ಬಂದು ಆಗುತ್ತವೆಯೋ ಆಗ ಈ ದೇಶದ ಸಂಘರ್ಷದಲ್ಲಿ ಮೂಗುತೂರಿಸಲು ಪ್ರಾರಂಭಿಸುತ್ತದೆ. ಕ್ಯೂಬಾದಲ್ಲಿ ಅಮೇರಿಕನ್ನರು ನಿಧಾನವಾಗಿ ಹರಡಿಕೊಳ್ಳಲಾರಂಭಿಸುತ್ತಾರೆ. ಸ್ವಾತಂತ್ರ್ಯ ಹೋರಾಟ ಬಿರುಸಾಗುತ್ತಿದ್ದಂತೆ ಸ್ಪೇನ್ ಮೇಲೆ ಯುದ್ಧ ಸಾರಿ, ಕೇವಲ ಮೂರು ತಿಂಗಳಲ್ಲಿ ಸ್ಪೇನ್ ಅಮೇರಿಕಾಕ್ಕೆ ಶರಣಾಗಿ ಹೋಗುತ್ತದೆ. ಸ್ಪೇನ್‌ನ ಗುಲಾಮಗಿರಿಯಿಂದ ಪಾರಾದ ಕ್ಯೂಬಾ ಅಮೇರಿಕಾದ ಹಿರಿತದಲ್ಲಿ ಸೀಲುಕಿ ನರಳುತ್ತದೆ. ಈಗ ಕ್ಯೂಬಾದ ಸ್ಥಿತಿ ಬಾಣಲೆಯಿಂದ ಹಾರಿ ಬೆಂಕಿಗೆ ಬಿದ್ದಂತಾಗಿತ್ತು. ಸ್ವಾತಂತ್ರ್ಯ ಪ್ರಿಯ ಮತೆ, ದೇಶಾಭಿಮಾನಿಗಳಾದ ಕ್ಯೂಬಾ ಜನರು ಅಮೇರಿಕಾ ಸಾಮ್ರಾಜ್ಯಶಾಹಿ ವಿರುದ್ಧ ಮುನಃ ಹೋರಾಟದಲ್ಲಿ ತೊಡಗಿಸಿಕೊಂಡು ಕೊನೆಗು ಅಮೇರಿಕೆಯ ಕಪಿ ಮುಷ್ಠಿಯಿಂದ ಪಾರಾಗಿ ಆ ದೇಶಕ್ಕೆ ಸಿಂಹಸ್ವಪ್ನವಾಗಿ ಮೆರೆದಿದ್ದು ಇತಿಹಾಸ ಸ್ವತಂತ್ರ ಕ್ಯೂಬಾದ ಆಡಳಿತ ಚುಕ್ಕಾಣಿಯನ್ನು ಹಿಡಿದವರಲ್ಲಿ ಡೋಮಾಸ ಎಸ್ಟ್ರಾಡಾ ಪಾಮಾ, ಜೋಸ್ ಗೋಮೇಜ್, ಮಾರಿಯೋ ಗ್ರೇಸಿಯಾ ಮನೋಕಲ್ ಮತ್ತು ಫಡೆಲ್ ಕ್ಯಾಸ್ಟ್ರೋ ಆ ದೇಶದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿ ಕ್ಯೂಬಾವನ್ನು ಸ್ವಾತಂತ್ರ್ಯ ಸ್ವಾಭಿಮಾನಿ ದೇಶವನ್ನಾಗಿಸಿ ತಮ್ಮ ಹೆಸರನ್ನು ಇತಿಹಾಸದಲ್ಲಿ ಅಜರಾಮರವಾಗಿಸಿಕೊಂಡಿದ್ದಾರೆ.

ಯಾವಾಗ ಕ್ಯೂಬಾ ಅಮೇರಿಕಾಕ್ಕೆ ಜಗ್ಗಲಿಲ್ಲವೋ ಆಗ ಆ ದೇಶದ ಮೇಲೆ ಆರ್ಥಿಕ ದಿಗ್ಭಂದನವನ್ನು ಹೇರಿ ಆ ದೇಶಕ್ಕೆ ರಫ್ತಾಗುವ ಪೆಟ್ರೋಲ್ ಡಿಜೈಲ್ ಆಹಾರ ಪದಾರ್ಥ ಇತರ ಸೌಕರ್ಯಗಳನ್ನು ನಿಲ್ಲಿಸುತ್ತದೆ. ಇದಕ್ಕೆ ಎದೆ ಗುಂದದ ಕ್ಯೂಬಾ ಇತರೆ ದೇಶಗಳು ಮಾನವೀಯ ಅನುಕಂಪದ ಆಧಾರದ ಮೇಲೆ ಸರಬುರಾಜು ಮಾಡುವ ಅಲ್ಪಸ್ವಲ್ಪ ಆಹಾರ ಪೆಟ್ರೋಲಿಯಂ ವಸ್ತುಗಳನ್ನು ಅಲ್ಲಿನ ಮಕ್ಕಳ ಶಾಲೆ, ಶಿಕ್ಷಣಕ್ಕೆ ಬಳಸಿಕೊಳ್ಳುತ್ತಾರೆ. ಮಕ್ಕಳಲ್ಲಿ ದೇಶಾಭಿಮಾನ ತುಂಬುತ್ತಾರೆ. ಫಿಡಲ್ ಕ್ಯಾಸ್ಟೋನನ್ನು ಹತ್ತೆ ಮಾಡಲು ಅಮೇರಿಕ ಇನ್ನಿಲ್ಲದಂತೆ ಹಲವಾರು ಬಾರಿ ಸಂಚು ರೂಪಿಸಿ ಸೋಲುತ್ತದೆ. ಲೇಖಕರು ಕ್ಯೂಬಾದಲ್ಲಿ ಕಂಡ ಮತ್ತೊಂದು ವಿಶೇಷತೆಯೆಂದರೆ, ಆದೇಶದ ಅಧ್ಯಕ್ಷನಾಗಿಯಾಗಿ, ಪ್ರತಿಯೊಬ್ಬ ಪಾರ್ಲಿಮೆಂಟ್ ಸದಸ್ಯನು ಕೂಡ ಅಧಿವೇಶನ ಇಲ್ಲದ ವೇಳೆಯಲ್ಲಿ ಕಬ್ಬಿನ ಗದ್ದೆಗೆ ಹೋಗಿ ಕೆಲಸಮಾಡುತ್ತಾರೆ ಇದ್ದ ಅಲ್ಲವೆ ನಮ್ಮ ಶರಣರು ಕಾಯಕವೇ ಕೈಲಾಸ ಎಂದು ಹೇಳಿದ್ದು! ಕಾಯಕದ ನಿಜವಾದ ಮೌಲ್ಯ ಕ್ಯೂಬಾದಲ್ಲಿ ಕಾಣುತ್ತಾರೆ.

ಕ್ಯೂಬಾಕ್ಕೆ ಅಮೇರಿಕಾ ನೀಡಿದ ಸಂಕಷ್ಟಗಳ ಸರಮಾಲೆಯೇ ಲೇಖಕರು ಪ್ರವಾಸಕಥನದಲ್ಲಿ ಬಿಚ್ಚಿಡುತ್ತಾರೆ. ಆನರನ್ನು ಹಸಿದು ಸಾಯುವಂತೆ ಮಾಡಿದರು. ಕಬ್ಬಿನಗದ್ದೆಗಳಲ್ಲಿ ಟ್ರ್ಯಾಕ್ಟರ್‌ಗಳಿದ್ದವು ಆದರೆ ತೈಲ ವಿರಲಿಲ್ಲ. ರೋಗಗಳಿಂದ ನರಳಿ ಸಾಯುವಂತೆ ಮಾಡಿದರು. ಹಸಿರು ಎಲೆಗಳಿಂದ ಜೀವ ಉಳಿಸಿಕೊಂಡರು. ಹಂಚಿ ತಿನ್ನುವುದನ್ನು ಕಲಿತರು. ಅವರ ದನಿಗಳನ್ನು ಕುಗ್ಗಿಸಲು ಯತ್ನಿಸಿದರು. ಅವು ಅಮೇರಿಕಾಕ್ಕೆ ಮರು ದನಿಗಳಾದವು ಇಡೀ ಜಗತ್ತು ಕ್ಯೂಬಾದ ಪರ ನಿಲ್ಲುತ್ತದೆ ಭಾರತದ ಗೋಧಿ, ಬ್ರೇಜಿಲಿನಿಂದ ಕಾಫಿ, ಚೀನಾದ ಸೈಕಲ್ಲುಗಳು, ಆಫ್ರಿಕಾದ ರಕ್ತ ಕ್ಯೂಬಾದೆಡೆಗೆ ಹರಿದು ಬರುತ್ತವೆ. ಒಂದು ಪುಟ್ಟ ಕ್ಯೂಬಾ ಪರವಾಗಿ ಗಡಿ, ಗೋಡೆ, ವರ್ಣ, ಮತ್ತ, ವರ್ಗಗಳನ್ನು ಮಾರಿ ಜನತೆ ಎದ್ದು ನಿಂತಿತು. ಅಮೇರಿಕಾದ ಸಾಮ್ರಾಜ್ಯಶಾಹಿತ್ವವನ್ನು ವಿರೋಧಿಸುವ ಜಗತ್ತಿನ ಅನೇಕ ದೇಶಗಳು ಕ್ಯೂಬಾದ ನೆರವಿಗೆ ನಿಂತು ಅಮೇರಿಕಾದ ಧ್ವನಿ ಅಡಗುವಂತೆ ಮಾಡಿದವು ಇದು ಕ್ಯೂಬಾಕ್ಕೆ ಮಾನವತೆಗೆ ಸಂದ ಜಯ ಸ್ವಾಭಿಮಾನ, ದೇಶಾಭಿಮಾನ, ಸಮಾನತೆಗೆ ವೇದಿಕೆಯಾದ ಕ್ಯೂಬಾದಲ್ಲಿ ಜಗತ್ತಿನ ಅನೇಕ ದೇಶಗಳು ಸೇರಿ ಯುವ ಜನೋತ್ಸವ ಸಮ್ಮೇಳನ ಆಯೋಜಿಸಿತು. ಈ ಸ್ಮಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಕನ್ನಡದ ಜಿ.ಎನ್. ಮೋಹನ್ ಅವರು ಪಾಲ್ಗೊಂಡ ಅನುಭವಗಳನ್ನು ಕ್ಯೂಬಾದ ಇತಿಹಾಸ ಸಂಸ್ಕೃತಿ ಸಾಹಿತ್ಯ ಕುರಿತು ಈ ಕೃತಿಯಲ್ಲಿ ಕಾವ್ಯ ಭಾಷೆಯಲ್ಲಿ ಸಂವಹನಗೊಳಿಸಿರುವರು ಹಾಗಾಗಿ ಇದು ಕೇವಲ ವರದಿ ಟಿಪ್ಪಣಿಯಾಗದೆ ಒಂದು ಸೃಜನಶೀಲ ಕೃತಿಯಾಗಿ ಎಲ್ಲರ ಗಮನ ಸೆಳೆಯುತ್ತದೆ.

■■


ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.



Scanned with CamScanner

RNI Regd. No. KARBIL/2014/54464





वर दे ! वीणा वादिनी वर दे !
प्रिय स्वतन्त्र-रव अमृत-मंत्र नव भारत में भर दे ।
काट अंध-उर के बंधन-स्तर
बहा जननि, ज्योतिर्मय निर्झर,
कलुष-भेद-तम हर प्रकाश भर जगमग जग कर दे !
नव गति, नव लय, ताल-छन्द नव,
नवल कंठ, नव जलद-मंद, रव,
नव नभ के नव विहंग वृन्द को नव पर, नव स्वर दे !

– सूर्यकांन्त त्रिपाठी 'निराला'

ಓ ತಾಯಿ ಸರಸ್ವತೀ
ನಿನ್ನ ವೀಣೆ ತಂತಿಗಳಲಿ
ಜೇಡ ಬಲೆಯ ನೂತಿದೆ
ನಿನ್ನ ಪಾದಪೀಠದ ಕಳ
ಗಿಲಿ ಹೆಗ್ಗಣ ಸೇರಿವೆ
ನಿನ್ನ ಕೈಯ ಪುಸ್ತಕವನು
ಗದ್ದಲರ್ಥ ತಿಂದಿದೆ
ನಿನ್ನ ಗುಡಿಯ ಗಂಟೆಗಳಿಗೆ
ತುಕ್ಕು ಹಿಡಿಯತೊಡಗಿದೆ
ಓ ತಾಯಿ ಸರಸ್ವತೀ
ಏನಿದೆಂಥ ದುರ್ಗತಿ !

– ಜಿ. ಎಸ್. ಶಿವರುದ್ರಪ್ಪ

ವರವ ಕೊಡು ! ಶಾರದೆ ವರವ ಕೊಡು
ಪ್ರಿಯ ಸ್ವತಂತ್ರ-ಧ್ವನಿ, ಅಮೃತ ಮಂತ್ರ
ನವ ಭಾರತದಲ್ಲಿ ಹರಡಿಸು
ಹೃದಯದಲ್ಲಿಯ ಅಂಧತ್ವ, ಬಂಧನ ತಗೆದುಹಾಕು
ಹರಿಸು ಜನನಿ, ಜ್ಯೋತಿರ್ಮಯ ಪ್ರಪಾತ
ಮಲಿನ-ಭೇದ ಅಂಧಕಾರ ಕಳೆದು ಪ್ರಕಾಶ ತುಂಬು
ಥಳಥಳಿಸಲಿ ಜಗವೆಲ್ಲ
ಹೊಸ ಗತಿ, ಹೊಸ ಲಯ, ತಾಳ, ಛಂದ ಹೊಸ
ಹೊಸ ಕಂಠ, ಹೊಸ ಮೇಘ ಘಜನೆ, ಹೊಸ ಧ್ವನಿ
ಹೊಸ ನಭದ ಹೊಸ ಪಕ್ಷಿಗಳ ಸಮೂಹಕ್ಕೆ
ಹೊಸ ಗರಿ ಹೊಸ ಸ್ವರ ಕೊಡು.

– ಸೂರ್ಯಕಾಂತ ತ್ರಿಪಾಠಿ 'ನಿರಾಲಾ'

ओ माँ सरस्वती
तेरे वीणा के तारों में
मकडीने जाल बुना है
तेरे पद के नीचे
चूहे-घूँस घुस गये हैं
तेरे हाथ के पुस्तक को
दीमक लगे
तेरे मंदिर के घंटियों को
जंग लग रहा है
ओ माँ सरस्वती
यह कैसी दुर्गति

– जी. एस. शिवरुद्रप्पा

ISSN 2320-0391

**सौम्य प्रकाशन**
'कबीर कुंज' महाबलेश्वर कॉलनी, दर्गा जेल के सामने,
विजयपुर - 586103 (कर्नाटक)

**ಸೌಮ್ಯ ಪ್ರಕಾಶನ**
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ, ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

Scanned with CamScanner